ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 12-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ರಿಂದ 4 ನೇ ಪ್ರತಿವಾದಿಯರ ಪರ ವಕೀಲರಿಂದಃ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ .**

**ಪಾಟೀ ಸವಾಲು -1,5 ಮತ್ತು 6 ನೇ ಪ್ರತಿವಾದಿಯರ ಪರ ಬಿಬಿಆರ್ ವಕೀಲರಿಂದಃ**

ನಾನು ಪಿಯುಸಿವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಯಾವುದೇ ಉದ್ಯೋಗ ಇರಲಿಲ್ಲ . ಈಗ ನಾನು 3 ವರ್ಷಗಳಿಂದ ರಿಯಲ್ ಎಸ್ಟೇಟ್ ಉಧ್ಯಮ ಮಾಡುತಿದ್ದೇನೆ. ಈಗ್ಗೆ 3 ವರ್ಷಗಳ ಹಿಂದೆ ನನಗೆ ಒಟ್ಟು ಕುಟುಂಬದ ಆದಾಯ ಬಿಟ್ಟರೇ ವೈಯಕ್ತಿಕ ಆದಾಯ ಇರಲಿಲ್ಲ. ವ್ಯಾಜ್ಯದಲ್ಲಿ ಕಾಣಿಸಿದ ಗುರುಕೃಪಾ ನಿವಾಸ ಮನೆ ನನ್ನ ಖಾಯಂ ನಿವಾಸ. ನನ್ನ ತಾಯಿಯ ತಾಯಿ ಕಾಶಿಯಮ್ಮರವರು ಬಂಟ್ವಾಳದ ಕಲ್ಲಡ್ಕ ಗ್ರಾಮದವರು.ನನ್ನ ತಾಯಿ ನನ್ನ ಅಜ್ಜಿ ಕಾಶಿಯಮ್ಮ ರವರಿಗೆ ಒಬ್ಬಳೇ ಮಗಳು . 1992 ರಿಂದ 1997 ರವರೆಗೆ ನನ್ನ ಅಣ್ಣ 2 ನೇ ಪ್ರತಿವಾದಿ ಕಲ್ಲಡ್ಕದ ಅಜ್ಜಿ ಮನೆಯಲ್ಲಿ ಇದ್ದರು. ನಾನು ಉಡುಪಿಯ ನಮ್ಮ ಮನೆಯಿಂದ ಕಲ್ಲಡ್ಕಕ್ಕೆ ಓಡಾಡಿಕೊಂಡು ಕಲ್ಲಡ್ಕದಲ್ಲಿ ಇದ್ದ ತೋಟವನ್ನು ನೋಡಿಕೊಳ್ಳುತಿದ್ದೆ. ಹುಬ್ಬಳ್ಳಿ ಶಿವಾಯಲ್ಲಪ್ಪ ಕೆರೂರು ಮತ್ತು ದಿನೇಶ್ ಪಡ್ಲಂಕರ್ ರವರು ನನ್ನ ಸ್ನೇಹಿತರು. ಹುಬ್ಬಳ್ಳಿ ಶಿವಾಯಲ್ಲಪ್ಪ ಕೆರೂರು ಮತ್ತು ದಿನೇಶ್ ಪಡ್ಲಂಕರ್ ರವರ ಜೊತೆ ನನ್ನ ವ್ಯವಹಾರದ ಸಂಬಂಧ ಇಲ್ಲ . ನಾನು ಹುಬ್ಬಳ್ಳಿಯ ಪಡ್ಲಂಕರ್ ಬಿಲ್ಡಿಂಗ್ ನಲ್ಲಿ ವಾಸ ಇರಲಿಲ್ಲ ಆದರೇ ನಾನು ಆಗಾಗ್ಗೆ ಉಡುಪಿಯಿಂದ ಹೋಗಿ ಬರುತಿದ್ದೆ . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಈಗ ನನಗೆ ನೆನಪಿಲ್ಲ ತುಂಬಾ ವರ್ಷ ಆಗಿದೆ. ಆದ್ದರಿಂದ ಗೊತ್ತಾಗುತಿಲ್ಲ ಎಂದು ತಿಳಿಸಿರುತಾರೆ . ಸಾಕ್ಷಿಗೆ ದೂರಿನ ಪ್ರತಿಯಲ್ಲಿ ಇರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಅದು ನನ್ನದಾ ಅಥವಾ ಇಲ್ಲವಾ ಎಂದು ಈಗ ನೆನಪು ಬರುತಿಲ್ಲ ಎಂದು ತಿಳಿಸಿರುತ್ತಾರೆ ಮತ್ತು ಸಹಿಯನ್ನು ಒಪ್ಪಿಕೊಂಡಿರುವುದಿಲ್ಲ. ಆದರೇ ಇರಬಹುದು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಪ್ರಮಾಣಿಕೃತ ಹೇಳಿಕೆಯ ದೃಢಿಕೃತ ಪ್ರತಿಯನ್ನು ತೋರಿಸಿ ಆ ರೀತಿ ಹೇಳಿಕೆ ಕೊಟ್ಟಿದೀರಿ ಅಲ್ಲವೆ ಮತ್ತು ಅದರಲ್ಲಿ ಇರುವ ಸಹಿ ನಿಮ್ಮದಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ನನಗೆ ನೆನಪು ಬರುತಿಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ದೋಷಾರೋಪಣಾ ಪತ್ರ ಕೂಡ ಆಗಿದೆ ಎಂದರೆ ನನಗೆ ನೆನಪು ಆಗುತ್ತಿಲ್ಲ ಎಂದು ತಿಳಿಸಿರುತ್ತಾರೆ. ಆ ಕ್ರಿಮಿನಲ್ ಪ್ರಕರಣದಲ್ಲಿ ನಿಮ್ಮ ವಕೀಲರು ಯಾರು

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ನೆನಪು ಆಗುತ್ತಿಲ್ಲ ಎಂದು ತಿಳಿಸಿರುತ್ತಾರೆ. ಎಷ್ಟು ವರ್ಷದ ಹಿಂದೆ ಪ್ರಕರಣ ದಾಖಸಲಾಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ನೆನಪು ಆಗುತ್ತಿಲ್ಲ ಎಂದು ತಿಳಿಸಿ , 10-12 ವರ್ಷಕ್ಕಿಂತ ಹಳೆಯದು ಎಂದು ತಿಳಿಸಿರುತ್ತಾರೆ. ನಾನು ಖಾಸಗಿ ದೂರನ್ನು ಮಾಡಿದಾಗ ಸುಳ್ಳು ಮಾಹಿತಿ ಕೊಟ್ಟಿದ್ದೇನೊ ಇಲ್ಲವೇ ಎಂದು ನೆನಪಿಲ್ಲ.

ನಾನು 2021 ರಿಂದ ಆದಾಯ ತೆರಿಗೆ ಇಲಾಖೆ ರಿಟನ್ಸ್ ಸಲ್ಲಿಸುತಿದ್ದೇನೆ. ಅದಕ್ಕಿಂತ ಅಂದರೆ 2021 ಕ್ಕಿಂತ ಮೊದಲು ನನ್ನ ಅಣ್ಣ ರಾಜೇಂದ್ರ ರವರು ನನ್ನ ಪರವಾಗಿ ರಿಟನ್ಸ್ ಸಲ್ಲಿಸುತಿದ್ದರು ಮತ್ತು ಬ್ಯಾಂಕ್ ನ ನನ್ನ ಖಾತೆಯನ್ನು ಕೂಡ ನಿರ್ವಹಣೆ ಮಾಡುತಿದ್ದರು ನಾನು ಕೇವಲ ಸಹಿ ಮಾಡಿ ಕೊಡುತಿದ್ದೆ . ಎಷ್ಟು ವರ್ಷದಿಂದ ನಿಮ್ಮ ಹೆಸರಿನಲ್ಲಿ ಬ್ಯಾಂಕ್ ಖಾತೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಕ್ಸಿಸ್ ಬ್ಯಾಂಕ್ ನಲ್ಲಿ ಇದೆ, ಅದನ್ನು ಕೂಡ ನನ್ನ ಅಣ್ಣ ರಾಜೇಂದ್ರ ರವರು ನನ್ನ ಪರವಾಗಿ ತೆರೆದಿರುತ್ತಾರೆ ನಾನು ಸಹಿ ಮಾತ್ರ ಮಾಡಿದ್ದೇನೆ. ಎಷ್ಟು ವರ್ಷಗಳಿಂದ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇದೆ ಎಂದು ನೆನಪಿಲ್ಲ. ನಾನು ಸ್ವತಃ 2021 ರವರೆಗೆ ನನ್ನ ಖಾತೆಯನ್ನು ಸ್ವತಃ ಆಪರೇಟ್ ಮಾಡಿಲ್ಲ. ಸಾಕ್ಷಿ ಮುಂದುವರಿದು ಅಲ್ಲಿವರೆಗೆ ನನ್ನ ಅಣ್ಣನೇ ಬ್ಯಾಂಕ್ ಖಾತೆ ನೋಡಿಕೊಳ್ಳುತಿದ್ದರು ನಾನು ಸಹಿ ಮಾತ್ರ ಮಾಡಿ ಕೊಡುತಿದ್ದೆ ಎಂದು ತಿಳಿಸಿರುತಾರೆ. ಕುಟುಂಬಕ್ಕೆ HUF ಖಾತೆ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ ಅದು ನನ್ನ ಅಣ್ಣನಿಗೆ ಗೊತ್ತಿರುತ್ತದೆ . ನನ್ನ ತಂದೆ ಇರುವಾಗ HUF ಖಾತೆ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ . ನಮ್ಮ ಒಟ್ಟು ಕುಟುಬಂದ ಹೆಸರಿನಲ್ಲಿ HUF ಖಾತೆ ಮತ್ತು HUF ಪಾನ್ ನಂಬರ್ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ಅಣ್ಣನಿಗೆ ಗೊತ್ತು ಎಂದು ತಿಳಿಸಿರುತ್ತಾರೆ. ನನ್ನ ತಂದೆ ಇರುವಾಗ ಅವರ ಹೆಸರಿನಲ್ಲಿ ಪ್ರತ್ಯೇಕ ಖಾತೆ ಇತ್ತು ಮತ್ತು ನನ್ನ ತಾಯಿ ಇದ್ದಾಗ ಅವರ ಹೆಸರಿನಲ್ಲಿ ಕೂಡ ಪ್ರತ್ಯೇಕ ಖಾತೆ ಇತ್ತು ಮತ್ತು ಅದೇ ರೀತಿ ನನ್ನ ಎರಡನೇ ಅಣ್ಣ ಮತ್ತು ನನ್ನ ಹೆಸರಿನಲ್ಲಿ ಕೂ ಪ್ರತ್ಯೇಕ ಖಾತೆಗಳು ಇದ್ದವು ಎಂದರೆ ಸರಿ . ಅದೇ ರೀತಿ ನನ್ನ ಅಣ್ಣ ಮತ್ತು ನನ್ನ ತಂದೆ ಪ್ರತ್ಯೇಕ ಆದಾಯ ತೆರಿಗೆ ರಿಟನ್ಸ್ ಸಲ್ಲಿಸುತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತ್ಯೇಕ ಖಾತೆ ಇತ್ತು ಆದರೇ ಎಲ್ಲವನ್ನು ಕೂಡ ನನ್ನ ಅಣ್ಣ ರಾಜೇಂದ್ರ ನೋಡಿಕೊಳ್ಳುತಿದ್ದರು

ನಾವು ಸಹಿ ಮಾತ್ರ ಮಾಡಿಕೊಡುತಿದ್ದೆವು ಎಂದು ತಿಳಿಸಿರುತ್ತಾರೆ.  ಸಾಕ್ಷಿಗೆ PPF ಖಾತೆಯ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ನನಗೆ ಅದನ್ನು ನೋಡಿದ ನೆನಪು ಇದೆ ಎಂದು ತಿಳಿಸಿರುತ್ತಾರೆ . PPF ಖಾತೆಗೆ ವರ್ಷಕ್ಕೆ ಎಷ್ಟು ಹಣ ಕಟ್ಟುತಿದ್ದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. PPF ಖಾತೆ ಈಗಲೂ ಕೂಡ ಇದೆ ಅದರಲ್ಲಿ ಎಷ್ಟು ಹಣ ಜಮೆ ಆಗಿದೆ ಎಂದು ನನಗೆ ಗೊತ್ತಿಲ್ಲ.  ನಾನು PPF ಖಾತೆಗೆ ಯಾವುದೇ ಹಣವನ್ನು ಜಮೆ ಮಾಡಿಲ್ಲ. ಕಾರಣ ನನಗೆ ಆದಾಯ ಇಲ್ಲ. ಸಾಕ್ಷಿಗೆ 4 ಜೆರಾಕ್ಸ್ ಪಾಲಿಸಿಯ ಬಾಂಡ್ ಗಳನ್ನು   ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಸದ್ರಿ ಪಾಲಿಸಿಗಳು ನನ್ನ ಹೆಸರಿನಲ್ಲಿ ಇದೆ ಎಂದು ತಿಳಿಸಿರುತ್ತಾರೆ. ಸದ್ರಿ ಪಾಲಿಸಿ ಸಂಖ್ಯೆ 621755407, 624095975, 621538398 , 620831263. (ಸದ್ರಿ ಪಾಲಿಸಿಗಳು ಜೆರಾಕ್ಸ್ ಆಗಿರುವುದರಿಂದ ಅವುಗಳನ್ನು ನಿಶಾನೆಯನ್ನಾಗಿ ಮಾಡಿರುವುದಿಲ್ಲ).  ಈ ಮೇಲೆ ಹೇಳಿದ ಎಲ್ ಐ ಸಿ ಬಾಂಡ್ ನ ಮೂಲ ಪ್ರತಿಗಳು ನಿಮ್ಮ ಬಳಿ ಇದೆ ಎಂದರೆ  ನಾನು ನೋಡಬೇಕು ಎಂದು ತಿಳಿಸಿರುತ್ತಾರೆ. ಈ  ಪಾಲಿಸಿಗಳಿಗೆ ನಾನು ಯಾವುದೇ ಪ್ರಿಮಿಯಮ್ ಕಟ್ಟುತಿರಲಿಲ್ಲ . ಎಲ್ಲಾ ಪ್ರಿಮಿಯಮ್ ಗಳನ್ನು ನನ್ನ ಅಣ್ಣ ರಾಜೇಂದ್ರ ರವರು ಕುಟುಂಬದ ಆದಾಯದಿಂದ ಕಟ್ಟುತಿದ್ದರು. ಪಾಲಿಸಿ ನಂ 621755407 ರ ಪಾಲಿಸಿ ಅವದಿ ಮುಗಿದಿದ್ದು ಅದರ ಹಣವನ್ನು ಅಂದರೆ ಒಟ್ಟು 19,50,000  ನಾನು ಪಡೆದಿರುತ್ತೇನೆ ಎಂದರೆ ಸರಿ. ನನ್ನ ಆಕ್ಸಿಸ್ ಬ್ಯಾಂಕ್ ನ ವೈಯಕ್ತಿಕ ಖಾತೆಗೆ ಸದರಿ ಹಣ ಜಮೆ ಆಗಿದೆ . ಸದ್ರಿ ಹಣ ನಿಮ್ಮ ಜಂಟಿ ಕುಟುಂಬದ ಹಣವೋ ಅಥವಾ ನಿಮ್ಮ ವೈಯಕ್ತಿಕ ಹಣವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವೈಯಕ್ತಿಕ ಹಣ ಎಂದು ತಿಳಿಸಿರುತ್ತಾರೆ. ನಾನು ವೈಯಕ್ತಿಕವಾಗಿ ಪ್ರಿಮಿಯಮ್ ನ್ನು ಸದ್ರಿ ಪಾಲಿಸಿಗೆ ಕಟ್ಟಿಲ್ಲ.   ಪಾಲಿಸಿಯಿಂದ ಬಂದ 19,50,000  ಹಣವನ್ನು ಕುಟುಂಬದ ಹಣ ಎಂದು ತೋರಿಸಿದ್ದಿರೋ ಅಥವಾ ವೈಯಕ್ತಿಕ ಹಣ ಎಂದು ತೋರಿಸಿದ್ದಿರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ವೈಯಕ್ತಿಕ ಹಣ ಎಂದುತೋರಿಸಿದ್ದೇನೆ . ಸಾಕ್ಷಿ

ಮುಂದುವರಿದು ಸದ್ರಿ ಹಣವನ್ನು ನಾನು ಪಡೆದ ಸಾಲಕ್ಕೆ ಕಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ನಾನು ಕಳೆದ 4 ವರ್ಷ ಗಳಿಂದ ಸಾಲ ಪಡೆಯುತಿದ್ದೇನೆ ಅದಕ್ಕಾಗಿ ಆ ಹಣ ಕಟ್ಟಿದ್ದೇನೆ. ನಾನು ವೈಯಕ್ತಿಕವಾಗಿ ಪಾಲಿಸಿ ಕಟ್ಟಿರುವ ಯಾವುದಾದರೂ ಪಾಲಿಸಿ ಮೆಚ್ಯೂರ್ ಆಗಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ವೈಯಕ್ತಿಕವಾಗಿ ಕಟ್ಟಿಲ್ಲ ಎಂದು ತಿಳಿಸಿರುತ್ತಾರೆ. ನಿಮ್ಮ ಹೆಸರಿನಲ್ಲಿ ಡಿಮ್ಯಾಟ್ ಖಾತೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ಅಣ್ಣ ನನ್ನ ಪರವಾಗಿ ಡಿಮ್ಯಾಟ್ ಅಕೌಂಟ್ ಒಪನ್ ಮಾಡಿದ್ದರು. ಈಗಲೂ ಕೂಡ ಇದೆ ಆದರೇ ಅದನ್ನು ಅಪರೇಟ್ ಮಾಡುತಿಲ್ಲ. ಈಗ ನಮ್ಮ ಡಿಮ್ಯಾಟ್ ಅಕೌಂಟ್‌ನಲ್ಲಿ ಎಷ್ಟು ಮತ್ತು ಯಾವ ಕಂಪೆನಿಯ ಶೇರ್ ಇದೆ ಎಂದು ನನಗೆ ಗೊತ್ತಿಲ್ಲ . ಈಗಲೂ ಕೂಡ ಡಿಮ್ಯಾಟ್ ಅಕೌಂಟ್ ನಿಷ್ಕ್ರೀಯವಾಗಿಲ್ಲ. 2021 ರಿಂದ ನಾನು ರಿಟನ್ಸ್ ಸಲ್ಲಿಸುವಾಗ ಡಿಮ್ಯಾಟ್ ಅಕೌಂಟ್ ಇರುವ ಬಗ್ಗೆ ನಾನು ರಿಟನ್ಸ್ ನಲ್ಲಿ ಕಾಣಿಸಿಲ್ಲ . ಡಿಮ್ಯಾಟ್ ಅಕೌಂಟ್‌ಯಲ್ಲಿ 0 ಬ್ಯಾಲೆನ್ಸ್ ಇದೆಯೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಡಿಮ್ಯಾಟ್ ಅಕೌಂಟ್‌ನ Extract ನ್ನು ನ್ಯಾಯಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೊಟ್ಟರೇ ಹಾಜರುಪಡಿಸುತ್ತೇನೆ ಎಂದು ತಿಳಿಸಿರುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.